ಉದಯವಾಣಿ 26/2/2018

## ಬಿಎಂಎಸ್ ಆಟೋ ರಿಕ್ಷಾ ಚಾಲಕ- ಮಾಲಕರ ಸೌ.ಸ. ಸಂಘ ಉದ್ಘಾಟನೆ

# ಸರಕಾರದ ಯೋಜನೆ ಜನರಿಗೆ ತಲುಪಲಿ: ಕಟೀಲು



ಡಾ. ಪ್ರಸಾದ್ ಭಂಡಾರಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

**ತೆಂಕಿಲ** ಫೆ. 25: ಜಿಲ್ಲೆಯಲ್ಲಿ ಅತೀ ಹೆಚ್ಚು ರಿಕ್ಷಾಗಳು ಇರುವ ಕ್ಷೇತ್ರ ಪುತ್ತೂರಿನಲ್ಲಿ ರಿಕ್ಷಾ ಚಾಲಕರಿಗೆ ಕೇಂದ್ರ ಮತ್ತು ರಾಜ್ಯ ಸರಕಾರದ ಹತ್ತಾರೂ ಯೋಜನೆಗಳನ್ನು ತಲುಪಿಸುವ ಕೆಲಸ ಸೌಹಾರ್ದ ಸಂಘದ ಮೂಲಕ ಆಗಬೇಕಾಗಿದೆ ಎಂದು ಸಂಸದ ನಳಿನ್ ಕುಮಾರ್ ಕಟೀಲು ಹೇಳಿದರು.

ತೆಂಕಿಲ ದರ್ಶನ್ ಹಾಲ್‌ನಲ್ಲಿ ರವಿವಾರ ನಡೆದ ಬಿ.ಎಂ. ಎಸ್. ಆಟೋ ರಿಕ್ಷಾ ಚಾಲಕ – ಮಾಲಕರ ಸಂಘದ 36ನೇ ವಾರ್ಷಿಕ ಮಹಾಸಭೆ, ಸಂಘದ ಸೌಹಾರ್ದ ಸಹಕಾರ ಸಂಘದ ಉದ್ಘಾಟನೆ, ಸಂಘದ ಸದಸ್ಯರ ಕುಟುಂಬ ಸಮ್ಮಿಲನ ಕಾರ್ಯಕ್ರಮದಲ್ಲಿ ಸಂಘ ಕಚೇರಿಯ ಕೀಯನ್ನು ಹಸ್ತಾಂತರ ಮಾಡಿ ಮಾತನಾಡಿ ದರು. ಆಧುನಿಕ ಸೌಲಭ್ಯಗಳನ್ನು ಒದಗಿಸುವ ಜತೆಗೆ ರಿಕ್ಷಾ ಚಾಲಕರ ಜೀವನ ಸುಂದರವಾಗಿಸಲು ಸಂಘವು ಸಾಲ ಸಹಿತ ಹಲವು ರೀತಿಯ ಕ್ರಮ ಕೈಗೊಳ್ಳಲಿ ಎಂದರು.

ಸಂಘದ ಲಾಂಛನವನ್ನು ಉದ್ಯಮಿ ಅಶೋಕ್ ರೈ ಕೋಡಿಂಬಾಡಿ ಅನಾವರಣಗೊಳಿಸಿ, ಸಮಾಜದಲ್ಲಿ ಪೊಲೀಸರು ಜನರಿಗೆ ರಕ್ಷಣೆ ಒದಗಿಸುತ್ತಾರೆ. ರಿಕ್ಷಾ ಚಾಲಕರು ರಾತ್ರಿ ಹಗಲಿರುಳೆನ್ನದೆ ಪೇಟೆ, ಗಲ್ಲಿಯಲ್ಲಿ ತಮ್ಮ ವಾಹನ ಓಡಿಸುವ ಮೂಲಕ ಇಡೀ ಸಮಾಜದ ರಕ್ಷಕರಾಗಿ ದುಡಿಯುತ್ತಿದ್ದಾರೆ. ಇಲ್ಲಿ ಕೇವಲ ಶ್ರಮ ಮತ್ತು ಜೀವನದ ತೊಂದರೆಯನ್ನು ಗುರುತಿಸುವಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ಸರಕಾರವೂ ರಿಕ್ಷಾ ಚಾಲಕರಿಗೆ ಹೆಚ್ಚಿನ ಸೌಲಭ್ಯ ನೀಡಬೇಕಾಗಿದೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಂಜೀವ ಮಠಂದೂರು ಮಾತನಾಡಿ, ಮೀಟರ್ ಬಡ್ಡಿಯಿಂದಾಗಿ ಅನೇಕ ರಿಕ್ಷಾ ಚಾಲಕರು ತೊಂದರೆ ಒಳಗಾಗಿದ್ದಾರೆ. ಮೀಟರ್ ಬಡ್ಡಿಯ ದಂಧೆ ನಿಲ್ಲಿಸಲು ಈ ಸೌಹಾರ್ದ ಸಹಕಾರಿ ಸಂಘದ ಅಗತ್ಯವಿದೆ.

### ದಾಖಲೆ ಪತ್ರಗಳು ಸರಿಯಾಗಿರಲಿ

**ವಾರ್ಷಿಕ ಮಹಾಸಭೆಯನ್ನು ಸಂಘದ ಗೌರವಾಧ್ಯಕ್ಷ ಡಾ| ಎಂ.ಕೆ. ಪ್ರಸಾದ್ ಉದ್ಘಾಟಿಸಿ, ರಿಕ್ಷಾ ಚಾಲಕರೆಲ್ಲರೂ ಬಡವರು. ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸೌಹಾರ್ದ ಸಹಕಾರಿ ಸಂಘ ಆರಂಭಿಸಲಾಗಿದೆ. ಮುಂದೆ ಕಡಿಮೆ ಬಡ್ಡಿ ದರದಲ್ಲಿ ರಿಕ್ಷಾ ಚಾಲಕರಿಗೆ ಸಾಲ ದೊರೆಯಲಿದೆ. ಸರಿಯಾದ ದಾಖಲೆ ಪತ್ರ, ಇನ್ಶೂರೆನ್ಸ್ ಬ್ಯಾಡ್ಜ್ ಲೈಸನ್ಸ್ ಹೊಂದಿರಬೇಕು. ಇದರಿಂದ ನಿಮಗೂ ಪ್ರಯಾಣಿಕರಿಗೂ ಪ್ರಯೋಜನ ಎಂದರು.**

ರಿಕ್ಷಾ ಚಾಲಕರು ದೇಶ ಕಟ್ಟುವ, ಸೌಹಾರ್ದ ಮೆರೆವ ಕೆಲಸ ಮಾಡುತ್ತಿದ್ದಾರೆ ಎಂದರು.

ಬಿಜೆಪಿ ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ವಿದ್ಯಾ ಆರ್. ಗೌರಿ ಮಾತನಾಡಿ, ಸೂರತ್, ಒಡಿಶಾ, ಬೆಂಗಳೂರಿನಲ್ಲಿ ಮಹಿಳೆಯರಿಗಾಗಿ ಪಿಂಕ್ ಆಟೋ ಇದೆ. ಅಲ್ಲಿ ಆಟೋ ರಿಕ್ಷಾದಲ್ಲಿ ಮಹಿಳಾ ಸದಸ್ಯರಿದ್ದಾರೆ. ಪುತ್ತೂರಿನಲ್ಲೂ ಮಹಿಳಾ ಸದಸ್ಯರು ಇರಬೇಕು ಎಂದರು.

### ಸಹಿ ಸಂಗ್ರಹ ಅಭಿಯಾನ

ಅಧ್ಯಕ್ಷತೆ ವಹಿಸಿದ್ದ ಬಿ.ಎಂ.ಎಸ್. ಆಟೋ ರಿಕ್ಷಾ ಚಾಲಕ, ಮಾಲಕರ ಸಂಘದ ಅಧ್ಯಕ್ಷ ಭಾಸ್ಕರ್ ನ್ಯಾಕ್ ಮಾತನಾಡಿ, ಸರಕಾರದಿಂದ ಸಂಸ್ಥೆಗಳ ಸಿಬಂದಿಗೂ ಇ.ಎಸ್.ಐ. ಸೌಲಭ್ಯ ಸಿಗುತ್ತವೆ. ರಿಕ್ಷಾ ಚಾಲಕ, ಮಾಲಕರಿಗೆ ಮತ್ತು ಅವರ ಕುಟುಂಬಗಳಿಗೆ ಈ ಸೌಲಭ್ಯ ಸಿಗುವ ನಿಟ್ಟಿನಲ್ಲಿ ಸಹಿ ಸಂಗ್ರಹ ಅಭಿಯಾನ ಕೈಗೊಳ್ಳಲಿದ್ದೇವೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಂಜೀವ ಮಠಂದೂರು, ಬಿಜೆಪಿ ರಾಜ್ಯ ಕಾರ್ಯಕಾರಿ ಸಮಿತಿಯ ಕಿಶೋರ್ ಬೊಟ್ಯಾಡಿ, ಹಿಂದೂ ಮುಖಂಡ ಅರುಣ್ ಕುಮಾರ್ ಪುತ್ತಿಲ, ಬಿ.ಎಂ. ಎಸ್. ಆಟೋ ರಿಕ್ಷಾ ಚಾಲಕ ಮಾಲಕರ ಸಂಘದ ಕಾನೂನು ಸಲಹೆಗಾರ ಮಾಧವ ಪೂಜಾರಿ ಶುಭ ಹಾರೈಸಿದರು. ಬಿ.ಎಂ.ಎಸ್. ಆಟೋ ರಿಕ್ಷಾ ಚಾಲಕ ಮಾಲಕರ ಸೌಹಾರ್ದ ಸಹಕಾರಿ ಸಂಘದ ನಿರ್ದೇಶಕರಾದ ಬಿ.ಕೆ. ದೇವಪ್ಪ ಗೌಡ, ಜಿ. ಹುಸೈನ್, ಬಾಲಕೃಷ್ಣ ಗೌಡ, ರಾಜೇಶ್ ಕೆ., ವಾಲ್ಟರ್ ರೆಬೆಲ್ಲೋ, ರಾಘವೇಂದ್ರ ರೈ, ಬಿ.ಕೆ. ಸುಂದರ ನಾಯ್ಕ ಜನಾರ್ದನ ಪೂಜಾರಿ, ನಾರಾಯಣ ಪೂಜಾರಿ, ಸಕೀನ, ಹರಿಣಾಕ್ಷಿ ಮೋಹನ್, ಗ್ರಾಮಾಂತರ ವಿವಿಧ ಘಟಕಗಳ ಅಧ್ಯಕ್ಷರು ಉಪಸ್ಥಿತರಿದ್ದರು.

ಬಿ.ಎಂ.ಎಸ್ ಆಟೋ ರಿಕ್ಷಾ ಚಾಲಕ ಮಾಲಕರ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಸುರೇಶ್ ಸುಧಾಕರ್ ನಾಯಕ್ ಪ್ರಾಸ್ತಾವಿಕವಾಗಿ ಮಾತನಾಡಿದರು.



ಸಂಸದ ನಳಿನ್ ಕುಮಾರ್ ಕಟೀಲು ಅವರು ಕಚೇರಿಯ ಕೀ ಹಸ್ತಾಂತರಿಸಿದರು.

ಅಶ್ರೀತಾ ಪ್ರಾರ್ಥಿಸಿದರು. ಸಂಘದ ಜಿಲ್ಲಾ ಕಾರ್ಯದರ್ಶಿ ಮೋಹನ್ ಹೆಗ್ಡೆ ಕಾರ್ಮಿಕ ಗೀತೆ ಹಾಡಿದರು. ಸಂಘದ ಅಧ್ಯಕ್ಷ ಸುರೇಶ್ ಸುಧಾಕರ್ ನಾಯಕ್ ಸ್ವಾಗತಿಸಿ, ಕಾರ್ಯದರ್ಶಿ ಸರ್ವಮಂಗಳ ವಂದಿಸಿದರು. ನವೀನ್ ಕುಲಾಲ್ ಕಾರ್ಯಕ್ರಮ ನಿರೂಪಿಸಿದರು.

ರಾಮಚಂದ್ರ, ಮಹೇಶ್ ಮಣಿಯ, ಫಾತಿಮಾ, ಸಮೀನಾ ಅವರಿಗೆ ಸಾಂಕೇತಿಕವಾಗಿ ಪಾಲು ಪ್ರಮಾಣಪತ್ರ ವಿತರಿಸಲಾಯಿತು. ಬಿ.ಎಂ.ಎಸ್. ಆಟೋ ರಿಕ್ಷಾ ಚಾಲಕ ಮಾಲಕರ ಸಂಘದ ಹಿರಿಯ ಬಿ.ಕೆ. ದೇವಪ್ಪ ಗೌಡ, ಮಾಜಿ ಅಧ್ಯಕ್ಷ ಮೋಹನ್ ಹೆಗ್ಡೆ ಮಾಜಿ ಅಧ್ಯಕ್ಷ ಹುಸೈನ್ ಅವರನ್ನು ಸಮ್ಮಾನಿಸಲಾಯಿತು.

### ಮುಳಿಯ ಪಂಚ ಪ್ರಶ್ನೆ

ಮುಳಿಯ ಜ್ಯುವೆಲ್ಸ್‌ರವರು ಪಂಚ ಪ್ರಶ್ನೆ ಹಮ್ಮಿಕೊಂಡಿದ್ದರು. ಸುಮಾರು 29 ಮಂದಿ ಸರಿಯಾದ ಉತ್ತರ ನೀಡಿದ್ದರು. ಚೀಟಿ ಎತ್ತುವ ಮೂಲಕ ಇಬ್ಬರು ವಿಜೇತರನ್ನು ಆಯ್ಕೆ ಮಾಡಲಾಯಿತು. ಸಂಸದ ನಳಿನ್ ಕುಮಾರ್ ಕಟೀಲು ಬಹುಮಾನ ವಿತರಿಸಿದರು.